RNU AIR DHARWAD

FEBRUARY 16, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ತೆಕ್ಕಲಕೋಟೆಯ, ಪ್ರಾಗ್ ಐತಿಹಾಸಿಕ ನೆಲೆ; ಐದು ಸಾವಿರ ವರ್ಷಗಳ ಹಿಂದಿದ್ದ, ನಾಗರಿಕತೆಯ ಕುರುಹು, ಪತ್ತೆ.
- ಹಾವೇರಿ ಜಿಲ್ಲೆ, ಗುಡ್ಡದ ಮಾದಾಪುರದ, ಶ್ರೀ ಸಿದ್ಧೇಶ್ವರ ಗ್ರಾಮ ಅರಣ್ಯ ಸಮಿತಿಯಿಂದ, ನೈಸರ್ಗಿಕ ಅರಣ್ಯಕ್ಕೆ, ಸಾಮಾಜಿಕ ಬೇಲಿ.
- ಇಂದು, ರೇಡಿಯೋ ಕಿಸಾನ್ ದಿವಸ್; ಮೈಸೂರಿನಲ್ಲಿ, 'ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಹಾಗೂ ಕೃಷಿ ನವೋದ್ಯಮ' ಕುರಿತ, ಕಾರ್ಯಾಗಾರ.
- 'ಭಾರತ–ಎಐ ಇಂಪ್ಯಾಕ್ಟ್ ಶೃಂಗಸಭೆ': ಹೊಸ ದಿಲ್ಲಿಯ, ಭಾರತ ಮಂಟಪಂದಲ್ಲಿ, ಇಂದು ಪ್ರಧಾನಮಂತ್ರಿ ಚಾಲನೆ.

<><><>

ಈಗ ವಾರ್ತೆಗಳ ವಿವರ

<><><>

ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲೂಕು, ತೆಕ್ಕಲಕೋಟೆಯ, ಪ್ರಾಗ್ ಐತಿಹಾಸಿಕ ನೆಲೆಗಳಲ್ಲಿ ಕಳೆದ 15 ದಿನಗಳಲ್ಲಿ ನಡೆದ ಉತ್ಖನನ ಕಾರ್ಯ, ಮೂರೂವರೆ ಸಾವಿರ ವರ್ಷಗಳಿಂದ, ಐದು ಸಾವಿರ ವರ್ಷಗಳ ಹಿಂದೆ, ಇಲ್ಲಿ ನಾಗರಿಕತೆ ಪಲ್ಲವಿಸಿತ್ತು ಎಂಬ, ಕುರುಹುಗಳನ್ನು ಬೆಳಕಿಗೆ ತಂದಿದೆ. ಅಮೆರಿಕದ ನ್ಯೂಯಾರ್ಕ್‌ನ, ಹಾರ್ಟ್‌ವಿಕ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ, ನಮಿತಾ ಎಸ್.ಸುಗಂಧಿ ನೇತೃತ್ವದಲ್ಲಿ ನಡೆದ, ಉತ್ಖನನ ಕಾರ್ಯದಲ್ಲಿ, ನವ ಶಿಲಾಯುಗದ ಪ್ರಮುಖ ಕುರುಹುಗಳು ಪತ್ತೆಯಾಗಿವೆ.

<><><>

ಈ ಕುರಿತು ಒಂದು ವರದಿ..

<><><>

*ತೆಕ್ಕಲಕೋಟೆಯು, ನವ ಶಿಲಾಯುಗದ ಪ್ರಾಗ್ ಐತಿಹಾಸಿಕ ತಾಣ. ಕುಪಗಲ್, ಪಿಕ್ಕಲಿಹಾಳ ಹಾಗೂ ಭೀಮಟ್ಕಾದಂತೆ, ಭಾರತದ ಪ್ರಮುಖ ನವ ಶಿಲಾಯುಗದ ತಾಣಗಳಲ್ಲಿ ಒಂದು. ತೆಕ್ಕಲಕೋಟೆ, 18ನೇ ಶತಮಾನದಲ್ಲಿ ಕಟ್ಟಲಾದ ಚೌಕಾಕಾರದ ಕೋಟೆಯನ್ನು ಹೊಂದಿದೆ. ವರವಿನ ಮಲ್ಲೇಶ್ವರ ಎನ್ನಲಾಗುವ, ಮಲ್ಲಯ್ಯನ ಗುಡಿ, ಕಾಡಸಿದ್ದೇಶ್ವರ ಮತ್ತು ಕೋಟೆ ಈಶ್ವರ ದೇವಾಲಯಗಳು, ವಿಶಿಷ್ಟ ನಿರ್ಮಿತಿಯನ್ನು ಹೊಂದಿವೆ. ತೆಕ್ಕಲಕೋಟೆಯಿಂದ 5 ಕಿಲೋ ಮೀಟರ್ ದೂರದಲ್ಲಿ, ಮೌರ್ಯ ಚಕ್ರವರ್ತಿ ಅಶೋಕನ, ಶಾಸನ*

*ಒಂದು ಲಭ್ಯವಾಗಿದೆ. ತೆಕ್ಕಲಕೋಟೆಯಲ್ಲಿ ಇತ್ತೀಚೆಗೆ ಕೈಗೊಳ್ಳಲಾದ ಉತ್ಖನನದಲ್ಲಿ, ಗೌಡರ ಮೂಲೆ ಗುಡ್ಡದಲ್ಲಿ, ಅಂದಾಜು 5 ಸಾವಿರ ವರ್ಷಗಳಷ್ಟು ಹಳೆಯದಾದ, ಎರಡು ಮಾನವ ಅಸ್ಥಿಪಂಜರಗಳು ಪತ್ತೆಯಾಗಿವೆ. ಶವಗಳ ಮೇಲೆ ಕಲ್ಲುಗಳನ್ನಿಟ್ಟು, ಹೂಳಲಾಗುವ ವಿಶಿಷ್ಟ ಪದ್ಧತಿ, ಕಲ್ಲಿನ ರೇಖಾಚಿತ್ರಗಳು, ಸೂಕ್ಷ್ಮ ಶಿಲಾಯುಗದ ಹರಿತ ಆಯುಧಗಳು, ಕಲ್ಲಿನ ಗೋಡೆಗಳು ಹಾಗೂ ನವ ಶಿಲಾಯುಗದಲ್ಲಿ, ಚಿನ್ನದ ಕಿವಿಯೋಲೆಗಳನ್ನು ಬಳಸುತ್ತಿದ್ದರು ಎಂಬುದಕ್ಕೆ, ಪುರಾವೆಗಳನ್ನು ಪುರಾತತ್ವ ಶಾಸ್ತ್ರಜ್ಞರು ಬಹು ಜತನದಿಂದ ಹೆಕ್ಕಿ ತೆಗೆದಿದ್ದಾರೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಹಾರ್ಟ್‌ವಿಕ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಹಾಗೂ ಖ್ಯಾತ ಮಾನವ ಶಾಸ್ತ್ರಜ್ಞೆ ನಮಿತಾ ಸುಗಂಧಿ.*

<><><>

ವಿವೇಕ (57) + ಪ್ರೊ.ನಮಿತಾ ಸುಗಂಧಿ+ ಸುರೇಖಾ ಸುರೇಶ ಧ್ವನಿ (60) ಸೆಕೆಂದುಗಳು

<><><>

*ತೆಕ್ಕಲಕೋಟೆ, ಕಳೆದ 60 ವರ್ಷಗಳಿಂದ,ಪುರಾತತ್ವ ಶಾಸ್ತ್ರಜ್ಞರಿಗೆ, ನವ ಶಿಲಾಯುಗದ ಪರಿಚಿತ ತಾಣ. 1960ರ ದಶಕದಲ್ಲಿ, ಪ್ರಪ್ರಥಮ ಬಾರಿಗೆ, ಪ್ರೊಫೆಸರ್ ಎಂ.ಎಸ್.ನಾಗರಾಜರಾವ್ ತೆಕ್ಕಲಕೋಟೆಯಲ್ಲಿ, ಪ್ರಾಗ್ಐತಿಹಾಸಿಕ ಕುರುಹುಗಳನ್ನು ಪತ್ತೆ ಮಾಡಿದರು. ಡೆಕ್ಕನ್ ಕಾಲೇಜ್, ತುಂಗಭದ್ರಾ ವಲಯದಲ್ಲಿ ಹಾಗೂ ಮಧ್ಯದ ಒಂದು ಗುಡ್ಡದ ತುದಿಯಲ್ಲಿ ಸಂಶೋಧನೆ ಮುಂದುವರೆಸಿತು. 3 ಸಾವಿರದಿಂದ 5 ಸಾವಿರ ವರ್ಷಗಳ ಹಿಂದೆ, ಇಲ್ಲಿ ನವ ಶಿಲಾಯುಗದ ಕುರುಹುಗಳು ಇವೆ ಎಂಬ ಮಹತ್ವದ ಮಾಹಿತಿ ಲಭ್ಯವಾಯಿತು. ಬಳಿಕ, ಪ್ರೊಫೆಸರ್ ನಾಗರಾಜರಾವ್ ಗುಡ್ಡದ ತಳಭಾಗದಲ್ಲಿಯೂ ಮಹತ್ವದ ಕುರುಹುಗಳು ಇವೆ ಎಂಬುದನ್ನು ಪತ್ತೆ ಹಚ್ಚಿದ್ದರು. ಆದರೆ, ವಿಸ್ತೃತ ಅಧ್ಯಯನ ಈ ವರೆಗೆ ಕೈಗೊಳ್ಳಲಾಗಿರಲಿಲ್ಲ. ನಾನು ಕಳೆದ 2005 ರಲ್ಲಿ ಅಶೋಕ ಅಬಕಾರಿ ಅವರೊಂದಿಗೆ, ಈ ತಾಣದಲ್ಲಿ ಸಂಶೋಧನೆ ಆರಂಭಿಸಿದೆ. ನಮಗೆ ಆಸಕ್ತಿ ಇದ್ದುದು, ಅಶೋಕ ಚಕ್ರವರ್ತಿಯ ಶಿಲಾಶಾಸನಗಳ ಮೌಲಿಕ ಅಧ್ಯಯನದಲ್ಲಿ. ಈ ಶಾಸನಗಳು ಇಲ್ಲಿ ಸ್ಥಾಪನೆಯಾದಾಗ, ಜನ ಎಲ್ಲಿ ಮತ್ತು ಹೇಗೆ ವಾಸಿಸುತ್ತಿದ್ದರು ಎಂಬುದರ ಬಗ್ಗೆ ನಮ್ಮ ಅಧ್ಯಯನ ಕೇಂದ್ರೀಕೃತವಾಗಿತ್ತು. ನವ ಶಿಲಾಯುಗದ ಬಳಿಕ, ಸೂಕ್ಷ್ಮ ಶಿಲಾಯುಗ ಹಾಗೂ ಲೋಹಯುಗದ ಸಂದರ್ಭದಲ್ಲಿ, ಅತೀ ಹೆಚ್ಚು ಜನಸಾಂದ್ರತೆಯ ಪ್ರದೇಶ, ತೆಕ್ಕಲಕೋಟೆಯಾಗಿತ್ತು ಎಂಬುದು ಖಾತ್ರಿಯಾಗಿದೆ. ಅಲ್ಲಿನ  ಜನ ಪಾಲಿಸುತ್ತಿದ್ದ, ಶವಸಂಸ್ಕಾರದ ವಿಶಿಷ್ಟ ಪದ್ಧತಿ ಬಗ್ಗೆ ಮಾಹಿತಿ ಸಿಕ್ಕಿದೆ.*

<><><>

ಹಾವೇರಿ ಜಿಲ್ಲೆ, ಪ್ರಾದೇಶಿಕ ಅರಣ್ಯ ವಲಯದ, ಹಿರೇಕೆರೂರು ಅರಣ್ಯ ವಿಭಾಗದ ಸಿಬ್ಬಂದಿ, ಗುಡ್ಡದ ಮಾದಾಪುರ ಗ್ರಾಮದ, ಕರಡಿಕೊಳ್ಳದ ಶ್ರೀ ಸಿದ್ಧೇಶ್ವರ ಗ್ರಾಮ ಅರಣ್ಯ ಸಮಿತಿ ಸಹಯೋಗದಲ್ಲಿ, ನೈಸರ್ಗಿಕ ಅರಣ್ಯ ಪುನರುತ್ಪತ್ತಿ ಯೋಜನೆಯಡಿ, ಸಾಮಾಜಿಕ ಬೇಲಿಯಾಗಿ ಪುನರುಜ್ಜೀವಿತಗೊಳಿಸಿ, ವಿಶಿಷ್ಟ ಸಾಮಾಜಿಕ ಅರಣ್ಯ ಮಾದರಿಯನ್ನು ಸೃಷ್ಟಿಸಿದ್ದಾರೆ. ಕಾರಣಾಂತರಗಳಿಂದ ಒತ್ತುವರಿಯಾಗಿ, ನಶಿಸುವ ಹಂತದಲ್ಲಿದ್ದ, ನೈಸರ್ಗಿಕ ಅರಣ್ಯ ಸಂಪತ್ತನ್ನು, ಸಾಮುದಾಯಿಕ ಸಹಭಾಗಿತ್ವದಲ್ಲಿ, ಪುನರುಜ್ಜೀವಿತಗೊಳಿಸುವಲ್ಲಿ, ಗುಡ್ಡದ ಮಾದಾಪುರ ಗ್ರಾಮಸ್ಥರು, ಯಶಸ್ವಿಯಾಗಿದ್ದಾರೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಾವೇರಿ ಜಿಲ್ಲೆ ರಾಣಿಬೆನ್ನೂರಿನ, ವನಸಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಕಾರ್ಯನಿರ್ವಾಹಕ ನಿರ್ದೇಶಕ, ಎಸ್.ಡಿ.ಬಳಿಗಾರ.

<><><>

ಎಸ್.ಡಿ.ಬಳಿಗಾರ ಧ್ವನಿ 50 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇಂದು, 'ರೇಡಿಯೋ ಕಿಸಾನ್ ದಿವಸ್'. ಬಾನುಲಿ ಕೃಷಿಕರ ದಿನ, ವಾರ್ಷಿಕ ಕಾರ್ಯಕ್ರಮವಾಗಿದ್ದು, ವಿಶೇ ' ಕೃಷಿ ಕಾರ್ಯಕ್ರಮ ಪ್ರಸಾರ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ, ಕೃಷಿ ಸಂಬಂಧಿ ರೈತಪರ ಯೋಜನೆಗಳ ಕುರಿತ ಚರ್ಚೆ, ಕ್ಷೇತ್ರ ತಜ್ಞರೊಂದಿಗೆ ಸಂವಾದ ಕಾರ್ಯಕ್ರಮಗಳು, ಆಯೋಜಿತವಾಗಿವೆ. ಕೃಷಿ ಪರಿಣಿತರು ಹಾಗೂ ರೈತರ ನಡುವಿನ, ಅಂತರವನ್ನು ಕಡಿಮೆ ಮಾಡಲು, ಸುಸ್ಥಿರ ಕೃಷಿ, ಮಾರುಕಟ್ಟೆ ಮಾಹಿತಿ ಮತ್ತು ಕೃಷಿ ತಂತ್ರಜ್ಞಾನ, ಮಣ್ಣಿನ ಆರೋಗ್ಯ, ಜಾನುವಾರು ಮತ್ತು ಹಣಕಾಸು ಯೋಜನೆಗಳ ಕುರಿತು, ತಜ್ಞರೊಂದಿಗೆ 'ಫಾರ್ಮ್ ಮತ್ತು ಹೋಮ್' ಚರ್ಚೆಗಳು ಪ್ರಸಾರವಾಗಲಿವೆ.

<><><>

'ಕಿಸಾನ್ ವಾಣಿ', ಭಾರತ ಸರ್ಕಾರದ, ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯದ, ಪ್ರಾಯೋಜಿತ ಕಾರ್ಯಕ್ರಮ. ಪ್ರತಿ ಮಂಗಳವಾರ, ಗುರುವಾರ ಹಾಗೂ ಶನಿವಾರದಂದು, ಸಂಜೆ 6.50ಕ್ಕೆ, ಹಾಗೂ ಕೃಷಿ ರಂಗ ಕಾರ್ಯಕ್ರಮ, ಸೋಮವಾರ, ಬುಧವಾರ ಹಾಗೂ ಶುಕ್ರವಾರ ಸಂಜೆ 6.50ಕ್ಕೆ ಪ್ರಸಾರವಾಗುತ್ತಿದೆ.

<><><>

ರೇಡಿಯೋ ಕಿಸಾನ್ ದಿವಸ್ ಹಿನ್ನೆಲೆ, 'ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಹಾಗೂ ಕೃಷಿ ನವೋದ್ಯಮಗಳು' ವಿಷಯ ಕುರಿತ, ಕಾರ್ಯಾಗಾರವನ್ನು, ಆಕಾಶವಾಣಿ ಮೈಸೂರು ಕೇಂದ್ರ, ಇಂದು ಬೆಳಗ್ಗೆ, 10 ಗಂಟೆಗೆ, ಮೈಸೂರಿನ, ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಆಯೋಜಿಸಿದೆ. ಮೈಸೂರಿನ, ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ, ಪ್ರೊಫೆಸರ್ ಶೈಲೇಂದ್ರ ಮೋಹನ ಕಾಯಾಗಾರ ಉದ್ಘಾಟಿಸಲಿದ್ದಾರೆ. ಮಂಡ್ಯದ ಕೃಷಿ ವಿಶ್ವವಿದ್ಯಾಲಯದ, ವಿಶೇಷಾಧಿಕಾರಿ ಕೆ.ಎಂ. ಹರಿಣಿ ಕುಮಾರ, ಆಶಯ ಭಾಷಣ ಮಾಡಲಿದ್ದಾರೆ. ಆಕಾಶವಾಣಿ ಮೈಸೂರು ಕೇಂದ್ರದ, ಕಾರ್ಯಕ್ರಮ ವಿಭಾಗದ ಸಹಾಯಕ ನಿರ್ದೇಶಕ, ಬೇದ್ರೆ ಮಂಜುನಾಥ ಅಧ್ಯಕ್ಷತೆ ವಹಿಸಲಿದ್ದಾರೆ. ಮೊದಲ ಗೋಷ್ಠಿ, 'ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ, ಕೃತಕ ಬುದ್ಧಿಮತ್ತೆ ಬಳಕೆ', ಹಾಗೂ ಎರಡನೇ ಗೋಷ್ಠಿ ಕೃಷಿ ನವೋದ್ಯಮಗಳಿಗೆ ಮೀಸಲಿದೆ.

<><><>

'ಭಾರತ–ಎಐ ಇಂಪ್ಯಾಕ್ಟ್ ಶೃಂಗಸಭೆ 2026', ಇಂದಿನಿಂದ 20ನೇ ತಾರೀಖಿನ ವರೆಗೆ, ಐದು ದಿನಗಳ ಕಾಲ, ಹೊಸ ದಿಲ್ಲಿಯ, ಭಾರತ ಮಂಟಪಂದಲ್ಲಿ ನಡೆಯಲಿದೆ. ಇಂದು ಬೆಳಗ್ಗೆ 8 ಗಂಟೆಗೆ, ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆಯ, ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮ ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಭಾರತ ಆತಿಥ್ಯದ, ಮೊದಲ, ಜಾಗತಿಕ, ಕೃತಕ ಬುದ್ಧಿಮತ್ತೆಯ ಶೃಂಗಸಭೆಯನ್ನು, ಇಂದು ಸಂಜೆ 5 ಗಂಟೆಗೆ, ಉದ್ಘಾಟಿಸಲಿದ್ದಾರೆ. *ಎ.ಐ. ಫಾರ್ ಆಲ್*, ಮಹಿಳಾ ಪ್ರಾತಿನಿಧ್ಯದ *ಎ.ಐ. ಬೈ ಹರ್* ಮತ್ತು ಯುವ ಪ್ರಾತಿನಿಧ್ಯದ *ಯುವ ಎ.ಐ.* ಎಂಬ, ಮೂರು ಶೀರ್ಷಿಕೆಗಳಡಿ, ವಿಚಾರ ವಿನಿಮಯ ನಡೆಯಲಿದ್ದು, 60ಕ್ಕೂ ಹೆಚ್ಚು ದೇಶಗಳಿಂದ, 4 ಸಾವಿರದ 6 ನೂರಾ 50ಕ್ಕೂ ಹೆಚ್ಚು, ಕ್ಷೇತ್ರ ತಜ್ಞರು ಭಾಗವಹಿಸುತ್ತಿದ್ದಾರೆ. ಈ ಶೃಂಗಸಭೆ, ಡಿಜಿಟಲ್ ಇಂಡಿಯಾ ಉಪಕ್ರಮ, ವಿದ್ಯುನ್ಮಾನ ಆಡಳಿತ ಹಾಗೂ ಸಾರ್ವಜನಿಕ ಮೂಲಸೌಕರ್ಯದ ಮೌಲ್ಯವರ್ಧನೆಯಲ್ಲಿ, ಕೃತಕ ಬುದ್ಧಿಮತ್ತೆಯ ಬಳಕೆ ಕುರಿತ, ಚಿಂತನ–ಮಂಥನದ ಮೇಲೆ, ಕೇಂದ್ರೀಕರಿಸಿದೆ.

<><><>

ಕೇಂದ್ರ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಇಂದು, ರಾಷ್ಟ್ರವ್ಯಾಪಿ ಡಿಜಿಟಲ್ ಅಭಿಯಾನಕ್ಕೆ ಚಾಲನೆ ನೀಡಲಿದೆ.

<><><>

ಆಕಾಶವಾಣಿ ಮೂಲಕ ಬಿತ್ತರಗೊಳ್ಳುವ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಜನಪ್ರಿಯ, 'ಮನ್ ಕಿ ಬಾತ್' ಕಾರ್ಯಕ್ರಮದಿಂದ ಪ್ರೇರಣೆ ಪಡೆದು, ಚಾಮರಾಜನಗರ ಜಿಲ್ಲೆ, ಮೂಡ್ಲುಪುರ ಗ್ರಾಮದ, ಶ್ವೇತಾ ಶಿವಶಂಕರ ಆರಾಧ್ಯ, ಸಿರಿಧಾನ್ಯಗಳ ಮೌಲ್ಯವರ್ಧಿತ ಆಹಾರ ಉಣಬಡಿಸುವ, ಹೋಟೆಲ್ ಆರಂಭಿಸಿ, ಹಲವಾರು ಮಹಿಳೆಯರಿಗೆ, ಉದ್ಯೋಗ ನೀಡಿದ್ದಾರೆ. ಬಯಲು ಸೀಮೆಯ, ಚಾಮರಾಜನಗರ ಜಿಲ್ಲೆಯಲ್ಲಿ, ಇಂದಿಗೂ ಹಿರಿ ತಲೆಮಾರಿನ ಕೃಷಿಕರು, ಸಿರಿ ಧಾನ್ಯಗಳನ್ನು ಬೆಳೆಯುತ್ತಿದ್ದಾರೆ. ವೋಕಲ್ ಫಾರ್ ಲೋಕಲ್ ಧ್ಯೇಯದ, ಕಡ್ಲೆಹುಳಿ ಹೃದಯ ಸ್ನೇಹಿ ಹೋಟೆಲ್, ನುಗ್ಗೆ ಸೊಪ್ಪಿನ ರಸ, ಬೆಟ್ಟದ ನೆಲ್ಲಿಕಾಯಿ, ಹಾಗಲಕಾಯಿ, ಬೂದು ಗುಂಬಳ ಜ್ಯೂಸ್, ಬಿಟ್‌ರೂಟ್ ಪಾನಕ ಹಾಗೂ ಸಿರಿಧಾನ್ಯ ಅಂಬಲಿ, ನಾಟಿ ಹಸು ಮಜ್ಜಿಗೆ, ಹೆಸರುವಾಸಿಯಾಗಿದೆ. ಮನೆಗಳಿಗೂ ತಲುಪಿಸುವ ವ್ಯವಸ್ಥೆ ಶ್ವೇತಾ ಹೊಂದಿದ್ದಾರೆ.

<><><>

ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿಜರುಗಿದ, ವಿಶ್ವಕಪ್ ಟಿ–20, ಲೀಗ್ ಹಂತದ ಪಂದ್ಯದಲ್ಲಿ, ಪಾಕಿಸ್ಥಾನ ಕ್ರಿಕೆಟ್ ತಂಡವನ್ನು, 61 ರನ್ ಅಂತರದಿಂದ ಮಣಿಸಿದ ಭಾರತ ತಂಡ, ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ, ವಿಕೆಟ್ ಕೀಪರ್ – ಬ್ಯಾಟ್ಸ್‌ಮನ್ ಇಶಾನ್ ಕಿಶನ್, 40 ಎಸೆತಗಳಲ್ಲಿ 10 ಬೌಂಡರಿ ಹಾಗೂ 3 ಸಿಕ್ಸರ್ ಒಳಗೊಂಡ, 77 ರನ್‌ಗಳ ನೆರವಿನಿಂದ, 7 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತು. 176 ರನ್ ಗುರಿ ಬೆನ್ನಟ್ಟಿದ ಪಾಕಿಸ್ಥಾನ ತಂಡ, 18 ಓವರ ಗಳಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು, ಕೇವಲ 114 ರನ್ ಗಳಿಸಿ, ಪರಾಭವಗೊಂಡಿತು. ಈ ಗೆಲುವಿನೊಂದಿಗೆ, ಸೂರ್ಯಕುಮಾರ ಯಾದವ್ ನೇತೃತ್ವದ, ಭಾರತ ಕ್ರಿಕೆಟ್ ತಂಡ, ಸೂಪರ್–8ರ ಹಂತಕ್ಕೆ, ಅರ್ಹತೆ ಪಡೆದಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ತೆಕ್ಕಲಕೋಟೆಯ, ಪ್ರಾಗ್ ಐತಿಹಾಸಿಕ ನೆಲೆ; ಐದು ಸಾವಿರ ವರ್ಷಗಳ ಹಿಂದಿದ್ದ, ನಾಗರಿಕತೆಯ ಕುರುಹು, ಪತ್ತೆ.
- ಹಾವೇರಿ ಜಿಲ್ಲೆ, ಗುಡ್ಡದ ಮಾದಾಪುರದ, ಶ್ರೀ ಸಿದ್ಧೇಶ್ವರ ಗ್ರಾಮ ಅರಣ್ಯ ಸಮಿತಿಯಿಂದ, ನೈಸರ್ಗಿಕ ಅರಣ್ಯಕ್ಕೆ, ಸಾಮಾಜಿಕ ಬೇಲಿ.
- ಇಂದು, ರೇಡಿಯೋ ಕಿಸಾನ್ ದಿವಸ್; ಮೈಸೂರಿನಲ್ಲಿ, 'ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಹಾಗೂ ಕೃಷಿ ನವೋದ್ಯಮ' ಕುರಿತ, ಕಾರ್ಯಾಗಾರ.
- 'ಭಾರತ–ಎಐ ಇಂಪ್ಯಾಕ್ಟ್ ಶೃಂಗಸಭೆ': ಹೊಸ ದಿಲ್ಲಿಯ, ಭಾರತ ಮಂಟಪಂದಲ್ಲಿ, ಇಂದು ಪ್ರಧಾನಮಂತ್ರಿ ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>